# ಸ್ಟೀವನ್ ಅಲನ್ ಸ್ಪಿಲ್‌ಬರ್ಗ್



ಸ್ಟೀವನ್ ಸ್ಪಿಲ್‌ಬರ್ಗ್

ವಿಶ್ವ ಸಿನಿಮಾದ ಪ್ರಸಿದ್ಧ ನಿರ್ಮಾಪಕ ಹಾಗೂ ನಿರ್ದೇಶಕರಲ್ಲಿ ಒಬ್ಬರಾದ ಸ್ಟೀವನ್ ಅಲನ್ ಸ್ಪಿಲ್‌ಬರ್ಗ್, ದೃಶ್ಯಮಾಧ್ಯಮದ ವ್ಯಾಕರಣವನ್ನು ನಿರಂತರವಾಗಿ ಮುರಿಯುತ್ತಾ ಕಟ್ಟುತ್ತಾ ಬಂದವರು. ಹಾಲಿವುಡ್‌ನ 'ಡ್ರೀಮ್ ವರ್ಕ್ಸ್ ಸ್ಟುಡಿಯೋಸ್'ನ ಸಹ ಸಂಸ್ಥಾಪಕರಲ್ಲಿ ಒಬ್ಬರು. 'ಕ್ಲೋಸ್ ಎನ್‌ಕೌಂಟರ್ಸ್ ಆಫ್ ಥರ್ಡ್ ಕೈಂಡ್', 'ಎಂಪೈರ್ ಆಫ್ ದಿ ಸನ್', 'ಷಿಂಡ್ಲರ್ಸ್ ಲಿಸ್ಟ್', 'ಮ್ಯೂನಿಚ್', 'ಲಿಂಕನ್', 'ವಾರ್ ಹಾರ್ಸ್', 'ಜುರಾಸಿಕ್ ಪಾರ್ಕ್', 'ವಾರ್ ಆಫ್ ದಿ ವರ್ಲ್ಡ್' ಅವರ ಕೆಲವು ಪ್ರಸಿದ್ಧ ಸಿನಿಮಾಗಳು. 'ಷಿಂಡ್ಲರ್ಸ್ ಲಿಸ್ಟ್' ನಿರ್ದೇಶನಕ್ಕಾಗಿ ಆಸ್ಕರ್ ಪ್ರಶಸ್ತಿ ಗೌರವ ಪಡೆದಿದ್ದಾರೆ.

ಹೇಗೆ?' ಎನ್ನುವ ಗಿರೀಶ ಕಾರ್ನಾಡರ 'ಯಯಾತಿ' ನಾಟಕದ ಮಾತುಗಳನ್ನು 'ಬಿಎಫ್‌ಜಿ' ನೆನಪಿಸುತ್ತಾನೆ. ಇಲ್ಲಿರುವುದು ರೋಮಾಂಚಕ ಕನಸುಗಳು ಮಾತ್ರವಲ್ಲ; ಮನಸ್ಸನ್ನು ಕ್ಷೋಭೆಗೀಡುಮಾಡುವ ದುಃಸ್ವಪ್ನಗಳೂ ಇವೆ. ಈ ಕನಸುಗಳನ್ನು ಬಿಎಫ್‌ಜಿ ಭರಣಿಗಳಲ್ಲಿ ಬಂಧಿಸಿಡುತ್ತಾನೆ; ಮಾಂತ್ರಿಕರು ಗಾಜಿನ ಸೀಸೆಗಳಲ್ಲಿ ಆತ್ಮಗಳನ್ನು ಹಿಡಿದಿಡುತ್ತಾರಲ್ಲ, ಹಾಗೆ.

ತಾನು ಸಂಗ್ರಹಿಸಿದ ಕನಸುಗಳನ್ನು 'ಬಿಎಫ್‌ಜಿ' ಎಚ್ಚರದಿಂದ ಬಳಸುತ್ತಾನೆ. ಸೋಫಿಯೊಂದಿಗೆ ಅನಾಥಾಶ್ರಮಕ್ಕೆ ತೆರಳುವ ಆತ, ಅಲ್ಲಿನ ಮಕ್ಕಳು ನಿದ್ದೆಯಲ್ಲಿ ಸುಂದರ ಸ್ವಪ್ನಗಳನ್ನು ಕಾಣುವಂತೆ ಮಾಡುತ್ತಾನೆ. ಅನಾಥ ಭಾವ ಕಳೆದುಹೋಗಿ ಮಕ್ಕಳೆಲ್ಲ ಅಪೂರ್ವ ಆನಂದವನ್ನು ಅನುಭವಿಸುವ ಮಾನವೀಯ ಕ್ಷಣವದು. ಇಂಥ ಮಾನವೀಯ ಪ್ರಸಂಗಗಳ ಕಾರಣದಿಂದಾಗಿಯೇ ಬಿಎಫ್‌ಜಿ ಆಪ್ತವಾಗುವುದು, ಗೆಳೆಯ ಎನ್ನುವ ಅನುಭೂತಿಯನ್ನು ಉಂಟುಮಾಡುವುದು.

ಕನಸುಗಳನ್ನು ಸಂಯೋಜಿಸುವ ಬಿಎಫ್‌ಜಿಯ ಶಕ್ತಿಯನ್ನು ದುಷ್ಟ ರಕ್ಕಸರ ಸೊಕ್ಕು ಮುರಿಯುವುದಕ್ಕಾಗಿ ಬಳಸಿಕೊಳ್ಳಲು ಸೋಫಿ ಮುಂದಾಗುತ್ತಾಳೆ. ಇಂಗ್ಲೆಂಡ್‌ನ ರಾಣಿಯ ಕನಸಿನಲ್ಲಿ ರಕ್ಕಸಕೊಳ್ಳದ ಬಿಂಬಗಳನ್ನು ಮೂಡಿಸುವ ಯೋಚನೆಯದು. ಇಂಗ್ಲೆಂಡ್‌ನಲ್ಲಿ ಮಕ್ಕಳು ಇದ್ದಕ್ಕಿದ್ದಂತೆ ಕಣ್ಮರೆಯಾಗುವುದು ಅಲ್ಲಿನ ಜನರಲ್ಲಿ ಆತಂಕ ಮೂಡಿಸಿರುತ್ತದೆ. ಅರಮನೆಯ ಅಂಗಳಕ್ಕೆ ಬರುವ ಬಿಎಫ್‌ಜಿ ಹಾಗೂ ಸೋಫಿ, ರಕ್ಕಸವೃತ್ತಾಂತವನ್ನು ಬಿಂಬಗಳಾಗಿ ಸಂಯೋಜಿಸಿ ರಾಣಿಗೆ ಕಾಣಿಸುತ್ತಾರೆ. ಮಕ್ಕಳ ಕಣ್ಮರೆಯ ಕಾರಣ ಕನಸಿನ ಮೂಲಕ ರಾಣಿಗೆ ತಿಳಿಯುತ್ತದೆ. ರಕ್ಕಸಕೊಳ್ಳದ ದೈತ್ಯರು ಮಕ್ಕಳನ್ನು ಗುಳುಂ ಮಾಡುವುದು ತಿಳಿದು ಆಕೆ ಬೆಚ್ಚಿಬೀಳುತ್ತಾಳೆ. ಕನಸೊಡೆದೆದ್ದು ರಾಣಿ ಕಣ್ಣುಬಿಟ್ಟರೆ ಸಿಂಡ್ರೆಲಾಳಂಥ ಸೋಫಿ ಕಾಣಿಸುತ್ತಾಳೆ. ಇದು ಬರಿ ಕನಸಲ್ಲ ಎನ್ನುವುದು ರಾಣಿಗೆ ಸ್ಪಷ್ಟವಾಗುತ್ತದೆ. ಸೋಫಿ ಎಲ್ಲ ಕಥೆಯನ್ನು ರಾಣಿಯೆದುರು ನಿವೇದಿಸಿಕೊಳ್ಳುತ್ತಾಳೆ.

ಅಂತಃಪುರದಲ್ಲಿ ರಾಣಿಯೊಂದಿಗೆ ಸೋಫಿ ತನ್ನ ಕಥೆ ಹೇಳುತ್ತಿದ್ದರೆ, ಇತ್ತ ಬಂಕಿಂಗ್‌ಹ್ಯಾಮ್ ಅರಮನೆಯ ಹೊರಗೆ ಎತ್ತರದ ಮರವನ್ನು ಹೋಲುವ ಅಜ್ಜನಿದ್ದಾನೆ. ಅವನನ್ನು ನೋಡಿ ಇಡೀ ರಾಜಪರಿವಾರಕ್ಕೆ ದಿಗ್ಭ್ರಮೆ. ರಾಣಿಯ ಸೂಚನೆಯ ಮೇರೆಗೆ ವಿಶೇಷ ಅತಿಥಿಗೆ ಸತ್ಕಾರ